**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂಃ269/2011 ಡಿ.ಡಬ್ಲೂಃ 02**

ಸಾಕ್ಷಿಯನ್ನು ಇಂದು ದಿನಾಂಕಃ **12.07.2023** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ವಾದಿ ಪರ ಶ್ರೀ ಜೆ.ಎಂ.ಎ ವಕೀಲರಿಂದಃ

ದಾವಾ-1 ನೇ ಆಸ್ತಿಯನ್ನು ನನ್ನ ತಂದೆಯವರು ಹಿಂದಿನಿಂದಲೂ ವ್ಯವಸಾಯ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿಯು ಸದರಿ ಆಸ್ತಿಯನ್ನು ನಮ್ಮ ಕುಟುಂಬದವರು ವ್ಯವಸಾಯ ಮಾಡಿಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ನಮ್ಮ ಕುಟುಂಬಸ್ಥರು ವ್ಯವಸಾಯ ಮಾಡುತ್ತಿದ್ದ ಕಾರಣ ಹಾಗೂ ನನ್ನ ತಂದೆಯವರು ಹಿರಿಯವರು ಇದ್ದ ಕಾರಣ ಸದರಿ ಆಸ್ತಿಯನ್ನು ಅವರ ಹೆಸರಿಗೆ ಮಂಜೂರು ಮಾಡಲಾಯಿತು ಎಂದರೆ ಸರಿ. ಸದರಿ ಆಸ್ತಿಯಲ್ಲಿ ನಮ್ಮ ಕುಟುಂಬಸ್ಥರೆಲ್ಲರಿಗೂ ಭಾಗ ಇರುತ್ತದೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ನಾನು ವ್ಯವಸಾಯ ಮಾಡಿರುತ್ತೇನೆ ಹಾಗೂ ಮಾಡುತ್ತಿದ್ದೇನೆ.

ದಾವಾ-3 ನೇ ಆಸ್ತಿಯು ನಮ್ಮ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಎಂದರೆ ಸಾಕ್ಷಿಯು ಸದರಿ ಆಸ್ತಿಯನ್ನು ಸರ್ಕಾರದವರು ನನ್ನ ತಂದೆಯ ಹೆಸರಿಗೆ ಮಂಜೂರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ-1 ನೇ ಆಸ್ತಿಯು ನಮ್ಮ ತಂದೆಗೆ ನನ್ನ ತಾತನಿಂದ ಪಿತ್ರಾರ್ಜಿತವಾಗಿ ಬಂದ ಆಸ್ತಿಯಾಗಿರುತ್ತದೆ. ದಾವಾ-3 ನೇ ಆಸ್ತಿ ನನ್ನ ತಂದೆ ಹೆಸರಿಗೆ ಯಾವ ವರ್ಷದಲ್ಲಿ ಮಂಜೂರಾಗಿರುತ್ತದೆ ಎನ್ನುವುದು ನನಗೆ ಗೊತ್ತಿರುವುದಿಲ್ಲ. ದಾವಾ-3 ನೇ ಆಸ್ತಿಯನ್ನು ಎಲ್ಲರೂ ಸೇರಿ ದಿನಾಂಕ **27.06.1997** ರಲ್ಲಿ ಮಾರಾಟ ಮಾಡಿರುತ್ತೇವೆ ಎಂದರೆ ಸರಿ.

ದಾವಾ-4 ನೇ ಆಸ್ತಿಯಲ್ಲಿ ಮೊದಲು ನನ್ನ ತಂದೆ-ತಾಯಿ ವಾಸ ಮಾಡುತ್ತಿದ್ದರು. ಸದರಿ ಆಸ್ತಿಯು ನಮ್ಮ ತಂದೆಯವರಿಗೆ ತಾತನಿಂದ ಪಿತ್ರಾರ್ಜಿತವಾಗಿ ಬಂದ ಆಸ್ತಿಯಾಗಿರುತ್ತದೆ. ಸದರಿ ಆಸ್ತಿಯು ಹಾಲಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ.

ದಾವಾ -4 ಆಸ್ತಿಯನ್ನು 6 ನೇ ಪ್ರತಿವಾದಿಯವರು 1 ನೇ ಪ್ರತಿವಾದಿಯವರ ಹೆಂಡತಿಗೆ ಮಾರಾಟ ಮಾಡಿದ್ದು, ಸದರಿಯವರು ತೀರಿಕೊಂಡ ನಂತರ ದಾವಾ ಆಸ್ತಿಯು 1 ನೇ ಪ್ರತಿವಾದಿಯವರ ಹೆಸರಿನಲ್ಲಿ ಇರುತ್ತದೆ. ದಾವಾ-4 ನೇ ಆಸ್ತಿಯನ್ನು ಮಾರಾಟ ಮಾಡಲು 6 ನೇ ಪ್ರತಿವಾದಿಯವರಿಗೆ ಸಂಪೂರ್ಣ ಹಕ್ಕು ಇರಲಿಲ್ಲ ಮತ್ತು ಸದರಿ ಆಸ್ತಿಯು ಕುಟುಂಬಸ್ಥರೆಲ್ಲರ ಹಕ್ಕಿಗೆ ಒಳಪಟ್ಟಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ.

ದಿನಾಂಕ 06.04.1996 ರ ಪಾಲು ವಿಭಾಗ ಪತ್ರ ನೋಂದಣಿ ಆಗಿರುವುದಿಲ್ಲ. ಸದರಿ ದಾಖಲೆಗೆ ನನ್ನ ತಂದೆ ಸಹ ಭಾಗಿಯಾಗಿರುತ್ತಾರೆ. ದಾವಾ-3 ನೇ ಆಸ್ತಿಯು ಸದರಿ ಪಾಲು ವಿಭಾಗ ಪತ್ರದಲ್ಲಿ ನನ್ನ ತಂದೆಯ ಭಾಗಕ್ಕೆ ನೀಡಲಾಗಿತ್ತು ಎಂದು ತೋರಿಸಲು ಸದರಿ ಪಾಲು ವಿಭಾಗ ಪತ್ರ ಹೊರತುಪಡಿಸಿ ಬೇರೆ ದಾಖಲೆಗಳು ಇರುವುದಿಲ್ಲ. ಪಾಲು ವಿಭಾಗ ಪತ್ರದಲ್ಲಿ ಸದರಿ ಆಸ್ತಿಯು ನನ್ನ ತಂದೆಯ ಭಾಗಕ್ಕೆ ಹೋದ ಕಾರಣ ಸದರಿ ಆಸ್ತಿ ಅವರ ಸಂಪೂರ್ಣ ಹಕ್ಕುವುಳ್ಳ ಆಸ್ತಿಯಾಗಿರುತ್ತದೆ. ಪಾಲು ವಿಭಾಗ ಪತ್ರ ಆದ 1 ವರ್ಷದ ನಂತರ ಸದರಿ ಆಸ್ತಿಯನ್ನು ಮಾರಾಟ ಮಾಡಲಾಗಿರುತ್ತದೆ. ಸದರಿ ಕ್ರಯಪತ್ರಕ್ಕೆ ನಾನು, 1 ನೇ ಪ್ರತಿವಾದಿ, ನನ್ನ ತಂದೆ ಮತ್ತು 6 ನೇ ಪ್ರತಿವಾದಿ ಸಹಿ ಮಾಡಿರುತ್ತಾರೆ.

ಪಾಲು ವಿಭಾಗ ಪತ್ರದಲ್ಲಿ ನಿಮಗೆ ಯಾವ ಆಸ್ತಿಯನ್ನು ನೀಡಲಾಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಪಾಲು ವಿಭಾಗ ಪತ್ರದಲ್ಲಿ ನನಗೆ ಒಂದು ಸ್ಥಿರಾಸ್ತಿಯನ್ನು ನೀಡಿದ್ದು, ಸದರಿ ಸ್ಥಿರಾಸ್ತಿಗೆ ನನಗೆ ಮಂಜೂರಾದ್ದಗ ಈಗ ಸರ್ವೇ ನಂ.34 ಎಂದು ನೀಡಲಾಗಿದ್ದು, ಅದರ ವಿಸ್ತೀರ್ಣ 1 ಎಕರೆ 39 ಗುಂಟೆ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ಪಾಲು ವಿಭಾಗ ಪತ್ರದಲ್ಲಿ ಕುಟುಂಬದ ಆಸ್ತಿ ಎಂದು ಪರಿಗಣಿಸಲಾಗಿತ್ತು ಎಂದರೆ ಸರಿಯಲ್ಲ.

ನಾನು ಹೇಳಿದಂತೆ ಯಾವುದೇ ಪಂಚಾಯತ ಪಾಲು ವಿಭಾಗ ಪತ್ರ ಆಗಿರುವುದಿಲ್ಲ, ಆದಕಾರಣ ದಾವಾ-3 ನೇ ಆಸ್ತಿಯನ್ನು ನಾನು, ನನ್ನ ತಂದೆ, 1 ನೇ ಪ್ರತಿವಾದಿ ಹಾಗೂ 6 ನೇ ಪ್ರತಿವಾದಿ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ನಿಡಿ-46 ದಾಖಲೆಯ ಪ್ರಕಾರ ದಾವಾ-2 ನೇ ಆಸ್ತಿಯ ವಿಸ್ತೀರ್ಣ 1 ಎಕರೆ 9 ಗುಂಟೆ ಇರುತ್ತದೆ. ಸದರಿ ಆಸ್ತಿಯನ್ನು ನನಗೆ ಮಂಜೂರು ಮಾಡಲು 1997-98 ರಲ್ಲಿ ಅರ್ಜಿ ಸಲ್ಲಿಸಿರುತ್ತೇನೆ. ಸದರಿ ಅರ್ಜಿಯಲ್ಲಿ ನಾನು ಸದರಿ ಆಸ್ತಿಯನ್ನು 30 ವರ್ಷಗಳಿಂದ ವ್ಯವಸಾಯ ಮಾಡುತ್ತಿದ್ದೆನು ಎಂದು ತೋರಿಸಿರುತ್ತೇನೆ. ಸದರಿ 30 ವರ್ಷಗಳ ಹಿಂದೆ ನಾನು ನನ್ನ ತಂದೆಯೊಂದಿಗೆ ಒಟ್ಟು ಕುಟುಂಬದ ಸದಸ್ಯನಾಗಿದ್ದೆನು ಎಂದರೆ ಸರಿ. ನಾನು ಒಟ್ಟು ಕುಟುಂಬದ ಸದಸ್ಯನ್ನಾಗಿ ವ್ಯವಸಾಯ ಮಾಡುತ್ತಿದ್ದ ಕಾರಣ ದಾವಾ-2 ನೇ ಆಸ್ತಿಯು ಒಟ್ಟು ಕುಟುಂಬದ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ನಾನು ದಾವಾ-2 ನೇ ಆಸ್ತಿಯನ್ನು ವಾದಿಗೆ ಭಾಗ ಕೊಡಬೇಕಾಗುತ್ತದೆ ಎಂದು ಸದರಿ ಆಸ್ತಿಯು ನನ್ನ ಸ್ವಯಾರ್ಜಿತ ಆಸ್ತಿ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ-3 ನೇ ಆಸ್ತಿಯನ್ನು ಹೊರತುಪಡಿಸಿ ದಾವಾ-1, 2 ಹಾಗೂ 4 ನೇ ಆಸ್ತಿಯಲ್ಲಿ ವಾದಿಗೆ ಭಾಗಂಶದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ವಾದಿಗೆ ಸದರಿ ಆಸ್ತಿಗಳಲ್ಲಿ ಭಾಗ ನೀಡಬೇಕಾಗುತ್ತದೆ ಎಂದು ನಾನು ದಿನಾಂಕ 06.04.1996 ರಲ್ಲಿ ಪಂಚಾಯತಿ ಪಾಲು ವಿಭಾಗ ಆಗಿರುತ್ತದೆ ಎಂದು ದಾಖಲೆ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**
**ನ್ಯಾಯಾಲಯ ತಿ.ನರಸೀಪುರ.**